INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,61- 64
Peer Reviewed Journal, Referred Journal

# ಕುಡಚಿ ಪ್ರದೇಶದ ಪುರಾತತ್ವ ಶೋಧನೆಯಲ್ಲಿ ಮುಸ್ಲಿಂ ಮಸೀದಿಗಳ ಪ್ರಭಾವ ಒಂದು ಅವಲೋಕನ

*ಸುಜಾತಾ ಸಿದ್ದಪ್ಪ ಪೋಳ.[1]

** ಡಾ.ಕೆ.ಎಲ್.ಎನ್.ಮೂರ್ತಿ[2]

ಕುಡಚಿ ಪ್ರದೇಶವು ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಒಂದು ಪ್ರಾಚೀನ ಗ್ರಾಮ. ರಾಯಭಾಗ ಬೆಳಗಾವಿಯಿಂದ ಸುಮಾರು 96 ಕಿ.ಮೀ. ಅಂತರದಲ್ಲಿದೆ. ಸಾಕಷ್ಟು ಶಿಲಾ ಶಾಸನಗಳಲ್ಲಿ ಬೆಳಗಾವಿ ನಗರಕ್ಕೆ ಬಾಗೆ ಹಾಗೂ ಪೂವಿನ ಬಾಗೆ ಎಂದು ಕರೆಯಲಾಗಿದೆ. ಅನ್ನಿಕೇರಿಯಲ್ಲಿ ದೊರೆತ ಕ್ರಿ.ಶ.1185ರ ಕಾಲಕ್ಕೆ ಸೇರಿದ ಶಾಸನದ ಪ್ರಕಾರ ರಾಯಭಾಗವನ್ನು ಘಟಿಕಾಸ್ತಾನವೆಂದು ಕರೆಯಲಾಗಿದೆ. ಈ ಊರಿನ ಹೆಸರು ತೆಂಕಲಬಾಗಿ ಎಂದು ಕರೆಯಲಾಗುತ್ತಿದೆ. ಇದೇ ಊರಿನ ಕನ್ನಡದ ಕವಿ ರಾಜಾಧಿತ್ಯ ಈ ಊರನ್ನು ಪೂವಿನಬಾಗೆ ಎಂದು ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ರಾಯಭಾಗ ಒಂದು ವಾಣಿಜ್ಯ ಕೇಂದ್ರವೂ ಸಹ ಆಗಿತ್ತು. ಈ ಭಾಗವನ್ನು ವಿಶೇಷವಾಗಿ ಮೊಘಲರು, ಮರಾಠರು ಸಾಕಷ್ಟು ಬಾರಿ ಲೂಟಿ ಮಾಡಿದ್ದರು ಎಂಬ ವಿಚಾರಗಳಿವೆ. ವಿಜಯಪುರದ ಆದಿಲಶಾಹಿ ಕಾಲದಲ್ಲಿ ರಾಯಭಾಗವು ಒಬ್ಬ ಅಧಿಕಾರಿಯ ಪ್ರಮುಖ ನೆಲೆಯಾಗಿತ್ತೆಂದು ಹೇಳಿಕೆಗಳಿವೆ. ಅದು ಒಂದು ಕಡೆಯಾದರೆ ನನ್ನ ಲೇಖನವು ಕುಡುಚಿ ಪ್ರದೇಶದ ಒಂದು ಹೊಸ ಅವಲೋಕನವಾಗಿದೆ. ಇದೊಂದು ಪ್ರಾಚೀನ ಕಾಲದ ಪ್ರದೇಶವಾಗಿದ್ದು, ಪ್ರಾಚೀನ ಕಾಲದ ಸಾಕಷ್ಟು ಅವಶೇಷಗಳು ಈ ಭಾಗದಲ್ಲಿ ದೊರೆತಿವೆ.

ಕುಡಚಿ ಗ್ರಾಮವು ಕರ್ನಾಟಕದ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಗ್ರಾಮವಾಗಿದ್ದು, ಈ ಭಾಗದ ಪ್ರಮುಖ ನದಿಯಾದ ಕೃಷ್ಣಾನದಿ ದಂಡೆ ಮೇಲಿರುವ ಈ ಪ್ರದೇಶ ಸುಮಾರು 15 ಕಿ.ಮೀ. ದೂರದಲ್ಲಿದೆ. ರಾಯಭಾಗ ತಾಲ್ಲೂಕಿನ ಪ್ರಮುಖ ಪಟ್ಟಣಗಳಲ್ಲಿ ಒಂದಾದ ಕುಡಚಿ ಒಂದು ಹೋಬಳಿ ಸಹ ಆಗಿದೆ. ಕುಡಚಿ ಗ್ರಾಮಕ್ಕೆ ಪ್ರಸ್ತುತ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳು ಸಹ ಇವೆ. ಅಂದರೆ ಖಾಸಗಿ ಹಾಗೂ ಸರ್ಕಾರಿ ಬಸ್ಸುಗಳು ರೈಲ್ವೆ ಸೌಕರ್ಯಗಳು ಇವೆ. ಕುಡುಚಿ ಗ್ರಾಮವು ನೈಸರ್ಗಿಕ

1.ಸಂಶೋಧಕರು, ಇತಿಹಾಸ ಮತ್ತು ಸಂಶೋಧನಾ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ತೊರವಿ, ವಿಜಯಪುರ

2.ಪ್ರಾಧ್ಯಾಪಕರು,ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ಸಂಶೋಧನಾ ವಿಭಾಗ,ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ದಿಬ್ಬದ ಮೇಲಿದೆ. ಅದು ಅಲ್ಲದೇ ಕುಡಚಿ ಗ್ರಾಮದ ದಕ್ಷಿಣ ಮತ್ತು ಆಗ್ನೇಯ ದಿಕ್ಕಿಗೆ ಸಾಕಷ್ಟು ದಿಬ್ಬಗಳಿರುವುದನ್ನು ಗಮನಿಸಲಾಗಿದೆ.

ವ್ಯವಸಾಯದ ದೃಷ್ಟಿಯಿಂದ ಕೆಂಪು ಮತ್ತು ಕಪ್ಪು ಮಣ್ಣಿನಿಂದ ಕೂಡಿದೆ. ಪ್ರಸ್ತುತ ವ್ಯವಸಾಯಕ್ಕೆ ಅನುಕೂಲಕರವಾದ ಫಲವತ್ತಾದ ಭೂಮಿ ಆಗಿದೆ ಎಂದು ಗಮನಿಸಲಾಗಿದೆ. ಕುಡಚಿ ಗ್ರಾಮಕ್ಕೆ ತನ್ನದೇ ಆದ ದಂತ ಕಥೆಗಳಿವೆ (ಐತಿಹ್ಯಗಳಿವೆ) ಎಂದು ತಿಳಿದುಬಂದಿದೆ. ಕೆಲವರ ಪ್ರಕಾರ ಕುಡಚಿ ಊರನ್ನು ಕೊಡಚಿ ಅಥವಾ ಗೊಡಾಚಿ ಎಂಬ ಪದದಿಂದ ಬಂದಿರಬಹುದೆಂದು ಸ್ಥಳೀಯರ ಹೇಳಿಕೆಗಳಿವೆ. ಕುಡಚಿಯು ಪ್ರಾಚೀನ ನೆಲೆಗಳಲ್ಲಿ ದೊರೆಯುವ ಅವಶೇಷಗಳನ್ನು ನವಶಿಲಾಯುಗದ ಕಾಲಕ್ಕೆ ಸೇರಿಸಬಹುದಾಗಿದೆ. ಅಂದರೆ ಕುಡಚಿ ಗ್ರಾಮದಿಂದ ಸುಮಾರು 5 ಕಿ.ಮೀ. ಅಂತರದಲ್ಲಿ ಹಾಗೂ ಗುಂಡವಾಡಕ್ಕೆ ಹೋಗುವ ದಾರಿಯಿಂದ ದಕ್ಷಿಣಕ್ಕೆ 1 ಕಿ.ಮೀ. ಅಂತರದಲ್ಲಿ ಹಾಳಾಗಿರುವ ಮಣ್ಣಿನ ದಿಬ್ಬವಿತ್ತು ಎಂದು ಹಿರಿಯರ ಹೇಳಿಕೆಗಳಿವೆ. ಆದರೆ ಅದು ಇಂದು ಸಂಪೂರ್ಣವಾಗಿ ಗುಡ್ಡ ಹಾಳಾಗಿದೆ. ಕಾರಣವೇನೆಂದರೆ ಈ ಸ್ಥಳ ರೈತರ ಸಾಗುವಳಿಗೆ ಒಳಪಟ್ಟಿದೆ. ಈ ಮಣ್ಣಿನ ದಿಬ್ಬವು ಸುಮಾರು 4 ಎಕರೆಗಳಷ್ಟು ವಿಶಾಲವಾಗಿತ್ತೆಂದು ಸ್ಥಳೀಯರ ಹೇಳಿಕೆಗಳಿವೆ. ಈ ಸ್ಥಳದಿಂದ ಪೂರ್ವ ದಿಕ್ಕಿಗೆ ಒಂದು ಹಳ್ಳವಿದೆ. ಇದು ದಕ್ಷಿಣ ಮತ್ತು ಉತ್ತರಾಭಿಮುಖವಾಗಿ ಹರಿಯುವ ಒಂದು ಹಳ್ಳವಾಗಿದೆ. ಈ ಹಳ್ಳದಿಂದ ಹರಿಯುವ ನೀರು ಸುಮಾರು 25 ಕಿ.ಮೀ. ದೂರ ಹರಿದು ಕೊನೆಗೆ ಪ್ರಮುಖ ನದಿಯಾದ ಕೃಷ್ಣ ನದಿಯನ್ನು ಸೇರುತ್ತದೆ. ಇಲ್ಲಿ ತಿಳಿಸಲಾಗಿರುವ 4 ಎಕರೆ ದಿಬ್ಬದಲ್ಲಿ ಸಾಕಷ್ಟು ಮಡಿಕೆ ಚೂರುಗಳು ದೊರೆತಿವೆ. ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೈಯಿಂದ ತಯಾರಿಸಿರುವ ಮಡಿಕೆ ಚೂರುಗಳು ಅಲ್ಲದೆ ಚಿಗರಿಯಿಂದ ತಯಾರಿಸಿದ ಮಡಿಕೆ ಚೂರುಗಳು ದೊರೆತಿವೆ.

ಈ ಮಡಿಕೆ ಚೂರುಗಳನ್ನು ಗಮನಿಸಿದರೆ ಕೆಂಪು ಮತ್ತು ಕಂದುವರ್ಣ, ಕಪ್ಪುಬಣ್ಣವುಳ್ಳ ಮಡಿಕೆ ಚೂರುಗಳು ಎಂದು ತಿಳಿಯಬಹುದಾಗಿದೆ. ಅಲ್ಲದೆ ಆಟಿಕೆ ಇತ್ಯಾದಿ ಅವಶೇಷಗಳು ಈ ಭಾಗದಲ್ಲಿ ಅಲ್ಲಲ್ಲಿ ದೊರೆತಿವೆ. ಕಂದು ಮಣ್ಣಿನ ಮಡಿಕೆಗಳ ಮೇಲೆ ದಪ್ಪದಾದ ಸರಳ ರೇಖೆಯಿಂದ ಕೂಡಿರುವುದನ್ನು ಗಮನಿಸಲಾಗಿದೆ. ಅವುಗಳನ್ನು ಕೈಯಿಂದ ಎಳೆದಿರಬಹುದು ಅಥವಾ ಚಿಗರಿಯಿಂದ ತಯಾರಿಸಲ್ಪಟ್ಟ ಕೆಂಪು ವರ್ಣದ ಮಡಿಕೆಯ ಚೂರುಗಳ ಮೇಲೆ ಕಪ್ಪು ವರ್ಣದ ಮಡಿಕೆಯ ಚೂರುಗಳ ಮೇಲೆ ಕಪ್ಪು ವರ್ಣದ ಸರಳ ರೇಖೆ ಹಾಗೂ ಅಡ್ಡದಾದ ರೇಖೆಗಳಿವೆ. ಅಲ್ಲದೆ ಈ ಭಾಗದಲ್ಲಿ ಬ್ಲೇಡಿನಂತಹ ಸಣ್ಣ ಸಣ್ಣ ಚೂರುಗಳ ಅವಶೇಷಗಳು ಸಹ ಅಲ್ಲಲ್ಲಿ ಕಂಡುಬಂದಿದೆ ಎಂಬ ಅಭಿಪ್ರಾಯವನ್ನು ಸ್ಥಳೀಯರು ತಿಳಿಸಿದ್ದಾರೆ. ಕುಡಚಿ ಧಾರ್ಮಿಕ ಹಿನ್ನೆಲೆಯಿಂದ ಇದೊಂದು ಮುಸ್ಲಿಂರ ಪ್ರಮುಖ ನೆಲೆಯಾಗಿತ್ತೆಂದು ಪರಿಗಣಿಸಬಹುದಾಗಿದೆ. ಆದಕಾರಣ ಇದೊಂದು ಮುಸ್ಲಿಂ ಧಾರ್ಮಿಕ ನೆಲೆ ಎಂದು ತಿಳಿಯಲಿಚ್ಛಿಸಿದ್ದೇನೆ ಮುಕುದುಮ್ ಶೇಖ್ ಮಹಮದ್ ಶಿರಾವ್ದೀನ್ ಜುನೈದ್ ದರ್ಗಾ ಈ ದರ್ಗಾವು ಊರಿನ

ಮಧ್ಯಭಾಗದಲ್ಲಿ ಉತ್ತರಾಭಿಮುಖವಾಗಿದೆ. ಇದು ತನ್ನದೇ ಆದ ಸ್ಥಳೀಯರ ಸಂಪ್ರದಾಯಗಳನ್ನು ಹೊಂದಿದೆ ಎಂದು ಹೇಳಬಹುದಾಗಿದೆ. ಮಹಮ್ಮದ್ ಶಿರಾವುದ್ದೀನ್ ಜುನ್ಯೆದಿ ಎಂಬ ಮುಸ್ಲಿಂ ಧರ್ಮಗುರು ಈ ಊರಿನಲ್ಲಿ ವಾಸವಾಗಿದ್ದನೆಂದು ಹಾಗೂ ಆತನು ಪ್ರತಿ ದಿನವೂ ಪ್ರಾರ್ಥನೆ ಮಾಡುತ್ತಿದ್ದ ಸ್ಥಳವೂ ಸಹ ಆಗಿತ್ತೆಂದು ಹೇಳಿಕೆಗಳಿವೆ. ಸ್ಥಳೀಯರ ಪ್ರಕಾರ ಒಂದು ದಿನ ಜಾಫರ್ ಹುಸೇನ್ ಎಂಬ 14 ವರ್ಷದ ಬಾಲಕ ಒಂದು ದಿನ ಮಧ್ಯಾಹ್ನದ ಸಂದರ್ಭದಲ್ಲಿ ಗಿಡದ ಕೆಳಗೆ ಮಲಗಿದ್ದನು. 1 ಗಂಟೆಯ ತರುವಾಯ ಆತನ ಮುಖದ ಮೇಲೆ ಬಿಸಿಲು ಬಿದ್ದಿತು. ಆತನಿಗೆ ಉಷ್ಣತೆ ಆಗಬಾರದೆಂಬ ಉದ್ದೇಶದಿಂದ ಕಪ್ಪು ನಾಗರ ಹಾವು ಆತನ ಮುಖದ ಮೇಲೆ ನೆರಳು ಬೀಳುವ ಹಾಗೆ ತನ್ನ ಹೆಡೆಯನ್ನು ಎತ್ತಿತು. ಇದನ್ನು ಅಲ್ಲಿಯ (ರಾಘೋ) ಎಂಬ ಗುರುಗಳು ನೋಡಿದರೆಂಬ ಹೇಳಿಕೆಗಳಿವೆ. ನಂತರ ಆತನಿಗೆ ಎಚ್ಚರಗೊಂಡಾಗ ನಡೆದ ಘಟನೆಗಳನ್ನೆಲ್ಲಾ ವಿವರವಾಗಿ ಹೇಳಿ ಮುಂದೆ ನೀನು ಬಾದಶಹನಾಗುತ್ತೀ ಎಂದರಂತೆ. ಅದಕ್ಕೆ ನೀನು ಏನು ಕೊಡುತ್ತೀಯಾ ಎಂದಾಗ ಉತ್ತರವಾಗಿ ಜಾಫರ್ ಹುಸೇನ್ ತಾವು ಕೇಳಿದ್ದನ್ನೆಲ್ಲಾ ಕೊಡುವೆ ಎಂದ. ನಂತರ ಗುರುಗಳು ನನಗೆ ನಿನ್ನಿಂದ ಏನೂ ಬೇಡ ನೀನು ಬಾದಶಹನಾದಾಗ ನಿನ್ನ ಹೆಸರಿನ ಜೊತೆಗೆ ಅಲ್ಲಾವುದ್ದೀನ್ ಎಬ ಹೆಸರನ್ನು ಸೇರಿಸರಬೇಕೆಂದು ಕೇಳಿಕೊಂಡರು ಮತ್ತು ಇಲ್ಲಿ ಮಸೀದಿಯೊಂದನ್ನು ನಿರ್ಮಿಸಬೇಕು. ಈ ಎರಡು ಕಾರ್ಯಗಳನ್ನು ಜಾಫರ್ ಹುಸೇನ್ ಪೂರೈಸಿದನು. ಅಂದಿನಿಂದ ಈ ಮಸೀದಿ ನಿರ್ಮಾಣವಾಯಿತು ಹಾಗೂ ಆತನ ಹೆಸರು ಜಾಫರ್ ಹುಸೇನ್ ಬದಲಾಗಿ ಅಲ್ಲಾವುದ್ದೀನ್ ಹಸನ್‌ಗಂಗು ಬಹಮನ್‌ಷಾ ಎಂದಾಯಿತು. ಇಲ್ಲಿರುವ ಪ್ರಾಚೀನವಾದ ಮಸೀದಿಯನ್ನು ಪ್ರಸ್ತುತ ಜೀರ್ಣೋದ್ಧಾರ ಮಾಡಲಾಗಿದೆ. ಈ ಮಸೀದಿ ಆಯತಾಕಾರವಾಗಿದೆ. ಇಲ್ಲಿರುವ ಗೋಡೆಯು ಸಮತಟ್ಟಾಗಿದ್ದು, ಮೇಲ್ಗಡೆ ಎತ್ತರವಾದ ಗುಮ್ಮಟವನ್ನು ನಿರ್ಮಿಸಲಾಗಿದೆ. ಮುಂಭಾಗದಲ್ಲಿ ಕಬ್ಬಿಣದ ದ್ವಾರವನ್ನು ನಿರ್ಮಿಸಲಾಗಿದೆ.

ಹಜರತ್ ಮೂಸಾ ಹೆಬಾ ಅಸರಫ್ ದೆ ಜುಮ್ಮಾ ದರ್ಗಾ ಇದು ಊರಿನ ಎತ್ತರಕ್ಕೆ ಸುಮಾರು 300 ಮೀಟರ್ ದೂರದಲ್ಲಿ ಹಾಗೂ ಕೃಷ್ಣಾ ನದಿಯಿಂದ ಸುಮಾರು 50 ಮೀಟರ್ ಅಂತರದಲ್ಲಿದೆ. ಇದನ್ನು ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಹಜರತ್ ದು ಅಸರಫ್ ದರ್ಗಾ ಎಂದು ಸ್ಥಳೀಯರ ಅಭಿಪ್ರಾಯದಂತೆ ಹಜರತ್ ಮ ಸಾಹೇಬ್ ಎಂಬ ಮಹಿಳೆಯು ಅರಬಸ್ಥಾನದ ಬಲುಚಿಸ್ಥಾನದವಳು ಶೇಕ್ ಮಹಮದ್ ಶಿರಾವುದ್ದೀನ್ ಜುನ್ಯೆದಿಯನ್ನು ಕಾಣಲು ಬಂದಳು. ಹಲವಾರು ವರ್ಷಗಳವರೆಗೆ ಇಲ್ಲಿ ತನ್ನ ಧರ್ಮ ಪ್ರಚಾರ ಕೈಗೊಂಡು ನಂತರ ಅವಳು ಇಲ್ಲಿ ಮರಣ ಹೊಂದಿದಳು. ಅವಳನ್ನು ಇದೇ ಸ್ಥಳದಲ್ಲಿ ಸಮಾಧಿ ಮಾಡಲಾಯಿತು ಎಂಬುದನ್ನು ಸ್ಥಳೀಯ ಮುಸ್ಲಿಂ ಬಾಂಧವರು ಹೇಳುತ್ತಾರೆ. ಈ ಮಸೀದಿ ಪ್ರಸ್ತುತ ಸುಸ್ಥಿತಿಯಲ್ಲಿದೆ. ಅಲ್ಲದೇ ಜೀರ್ಣೋದ್ಧಾರವಾಗಿದೆ. ಈ ಮಸೀದಿಯು ವಿನ್ಯಾಸದಲ್ಲಿ ಆಯತಾಕಾರವಾಗಿದ್ದ, ದೊಡ್ಡ ದೊಡ್ಡ ಹಜಾರದ ಮಧ್ಯದಲ್ಲಿ ಚೌಕಾಕಾರವಾಗಿದೆ.

ಗೋಡೆಯು ಸಮತಟ್ಟಾಗಿದ್ದು ಮೇಲ್ಭಾಗದಲ್ಲಿ ವೃತ್ತಾಕಾರವನ್ನು ಹೊಂದಿರುವ ಗುಮ್ಮಟವು ಸಿಮೆಂಟ್ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ವೃತ್ತಾಕಾರದ ವಿನ್ಯಾಸವನ್ನು ಹೊಂಇದುರುವುದರಿಂದ ಇದನ್ನು ವಿಜಯಪುರ ಆದಿಲ್‌ಶಾಹಿಗಳ ಕಾಲದ ಗುಮ್ಮಟಗಳನ್ನು ನೆನಪಿಸಬಹುದಾಗಿದೆ. ಈ ಮಸೀದಿಯ ದ್ವಾರವು ಸಾಧಾರಣ ಶೈಲಿಯದ್ದಾಗಿದೆ. ಅಲ್ಲದೇ ಹೊರಾಂಗಣ ಭಾಗವನ್ನು ಚೌಕಾಕಾರವಾಗಿ ನಿರ್ಮಿಸಲಾಗಿದೆ. ಕುಡಚಿ ಗ್ರಾಮದಲ್ಲಿ ಸರಿಸುಮಾರು 39 ದರ್ಗಾಗಳು ಇದ್ದವೆಂದು ಸ್ಥಳೀಯರ ಹೇಳಿಕೆಗಳಾಗಿದ್ದರೂ ಸಹ ಸಾಕಷ್ಟು ನಶಿಸಿ ಹೋಗಿವೆ. ಆದಕಾರಣ ಇದೊಂದು ಮುಸ್ಲಿಂರ ಪ್ರಮುಖ ಸ್ಥಳವೆಂದು ಪರಿಗಣಿಸಬಹುದಾಗಿದೆ. ಕುಡಚಿ ಗ್ರಾಮದಲ್ಲಿ ಮುಸ್ಲಿಂ ದರ್ಗಾಗಳ ಜೊತೆ ಹಿಂದೂ ದೇವಾಲಯಗಳಾದ ವೀರಭದ್ರ ಹಾಗೂ ವಿಠ್ಠಲ ದೇವಾಲಯಗಳಿವೆ. ಅಲ್ಲದೇ ಜೈನ ಪರಂಫರೆಯ ಪೂರಕವಾಗಿ ಜೈನ ನೆಲೆ ಇತ್ತೆಂದು ಕೆಲವರ ಅಭಿಪ್ರಾಯವಾಗಿದೆ. ಬಹಮನಿ ಸಾಮ್ರಾಜ್ಯದ ಸ್ಥಾಪಕನಾದ ಒಂದನೇ ಅಲ್ಲಾವುದ್ದೀನನಿಂದ ಕುಡಚಿ ಬಳಿ ಹದಿನೆಂಟು ಸಾವಿರ ಎಕರೆ ಭೂಮಿಯನ್ನು ಪಡೆದರೆಂದು ಹೇಳಿಕೆಗಳಿವೆ. ಒಂದು ಲಕ್ಷ ಜನ ಕುಡಚಿಯ ದರ್ಗಾದಲ್ಲಿ ಅದರಲ್ಲೂ ಉರುಸಿನಲ್ಲಿ ಭಾಗವಹಿಸುತ್ತಾರೆ ಎಂಬ ಹೇಳಿಕೆಗಳಿವೆ.

ಒಂದನೆಯ ಅಲ್ಲಾವುದ್ದೀನ್ ಕಾಲದವನೆಂದು ಹೇಳಲಾಗಿರುವ್ ಮುಖಮುದ್ದಶರೀಫ ಸಾಹೇಬ ಜುನೈದಿ ಅವರ ದರ್ಗಾ ಸಹ ಇಲ್ಲಿವೆ. ಪ್ರತಿವರ್ಷ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಉರುಸ್ ಜರುಗುತ್ತದೆ. ಕುಡಚಿಯ ರೈಲ್ವೆ ನಿಲ್ದಾಣದ ಹತ್ತಿರ ಹೌಸಿಲ್ ಆಸೀಫ್ ದಸ್ತಗಿರ್ ದರ್ಗಾವಿದೆ. ಕುಡಚಿಯಲ್ಲಿ ಅತ್ಯಂತ ಪ್ರಾಚೀನ ದರ್ಗಾ ಮುಖದುಮ್ಮ ಮಸೀದಿಯನ್ನು ಬಹಮನ್ ಷಾ ಕಟ್ಟಿಸಿದನೆಂದು ಸ್ಥಳೀಯರ್ ಹೇಳಿಕೆಗಳಿವೆ. ಒಟ್ಟಾರೆ ಚಾರಿತ್ರಿಕವಾಗಿ ಕುಡಚಿ ಒಂದು ಪಾರ್ಚೀನ ಕಾಲದ ನೆಲೆಯಾಗಿದ್ದು, ತನ್ನದೇ ಆದ ಇತಿಹಾಸವನ್ನು ನಿರ್ಮಿಸಿದೆ. ಈ ಕುಡಚಿ ವಿಶೇಷವಾಗಿ ಮಸೀದಿಗಳ ಒಂದು ತವರೂರು ಎಂದು ಹೇಳಬಯಸುತ್ತೇನೆ.

**ಆಧಾರ ಗ್ರಂಥಗಳು**


1. ಸೂರ್ಯನಾಥ್ ಯು ಕಾಮತ್ – ಕರ್ನಾಟಕ ರಾಜ್ಯ ಗ್ಯಾಜೆಟೀಯರ್ ಬೆಳಗಾಂ ಜಿಲ್ಲೆ, ಬೆಂಗಳೂರು.1987
2. ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕರ್ಣಾಟಕ ಸಂಸ್ಕೃತಿ ಸಮೀಕ್ಷೆ, 2016,
3. ಮನೋಜ ಪಾಟೀಲ – ಬೆಳಗಾವಿ ಜಿಲ್ಲೆಗಳ ಮಸೀದಿಗಳು, ಪವನ ಪ್ರಕಾಶನ ತಿಳಕವಾಡಿ, ಬೆಳಗಾವಿ, 1987.
4. ಬೆಳಗಾವಿ, ಜಿಲ್ಲೆ ಮಾನವ ಅಭಿವೃದ್ಧಿ ವರದಿ, 1990.